೧೦

ಚಾಲಿಕ್ಯರು ಶತಮಾನದ ಪ್ರಾರಂಭದಲ್ಲಿ ರಾಷ್ಟ್ರಕೂಟರ ಅಧೀನದಲ್ಲಿದ್ದರು. ರಾಷ್ಟ್ರಕೂಟರೂ ಗಂಗರೂ ನಂಟರಾದುದರಿಂದ ಅನ್ಯೋನ ನೆರವಿತ್ತು. ಇಬ್ಬರೂ ಏಳಿಗೆಗೆ ಬರುತ್ತಿದ್ದರು.ಗಂಗರ ಮಾರಸೀಂಹ ಅರಿವರ್ಗಕ್ಕೆ ಸಿಂಹಪ್ರಾಯನಾಗಿದ್ದನು. ಅವನ ಮಂತ್ರಿ ಹಾಗೂ ಸೇನಾಧಿಪತಿ ಚಾಮುಂಡರಾಯ ಸಮರ ಪರುಶುರಾಮನೆನಿಸಿ ಅರಿಭಯಂಕರನಾಗಿದ್ದನು. ರಾಷ್ಟ್ರಕೂಟರ ಕರ್ಕನು ಸಾಮ್ರಾಜ್ಯವನ್ನಾಳಲು ಅಶಕ್ತನಾಗಿ ಸದಾ ಗಂಗರ ನೆರವಿನಿಂದಲೇ ಬಾಳಬೇಕಾಯಿತು.

ರಾಷ್ಟ್ರಕೂಟರಿಗೂ ಚಾಲಿಕ್ಯರಿಗೂ ಬಂಧುತ್ವವೂ ಇತ್ತು. ಕೆಲವೊಮ್ಮೆ ಎರಡು ವಂಶಗಳೂ ಹಣಾಹಣಿಯಾಡಿದ್ದವು. ಎರಡನೇ ಅರಿಕೇಸರಿಯ ಕಾಲದಲ್ಲಿ ರಾಷ್ಟ್ರಕೂಟರಲ್ಲೇ ಅನೈಕಮತ್ಯ ಊಂಟಾಗಿ ಗೊಜ್ಜರ ತನ್ನಣ್ಣನನ್ನು ಮೂಲೆಗೊತ್ತಿ ತಾನೇ ರಾಜನಾಗಿ ಪ್ರಜಾಪೀಡಕನಾದನು. ಆಗ ಎರಡನೇ ಅರಿಕೇಸರಿ ಗೊಜ್ಜರನನ್ನು ಸೋಲಿಸಿ ರಾಷ್ಟ್ರಕೂಟ ಪ್ರತಿಷ್ಠಾಚಾರ್ಯನೆನಿಸಿದನು. ಮೂರನೇ ಕೃಷ್ಣನ ಕಾಲದಲ್ಲಿ ರಾಷ್ಟ್ರಕೂಟ ಸಮ್ರಾಜ್ಯ ಸುಭದ್ರವಾಗಿತ್ತು. ಆದರೆ ಕೃಷ್ಣನ ಮಗ ಕರ್ಕನು ಸಿಂಹಾಸನವೇರಿದ ಮೇಲೆ ಸಾಮ್ರಾಜ್ಯ ಒಳಗೊಳಗೇ ಶಿಥಿಲವಾಯಿತು.

ರಾಷ್ಟ್ರಕೂಟರಿಗೂ ಚಾಲುಕ್ಯರಿಗೂ ಆಗಾಗ ಗಡಿ ಜಗಳಗಳಾದವು. ಕೆಲವು ವಿವಾದಗ್ರಸ್ಥ ಪ್ರದೇಶಗಳಿಂದಾಗಿ, ಎರಡು ರಾಷ್ಟ್ರಗಳೂ ಕಣಕ್ಕಿಳಿಯಬೇಕಾಯಿತು.

"ಪ್ರಭು, ಈ ಸಂದರ್ಭದಲ್ಲಿ ತಾವು ತುಂಬ ಎಚ್ಚರವಾಗಿರಬೇಕು. ರಾಷ್ಟ್ರಕೂಟರು ಜೈನಮನೆತನದ ಅರಸರು !ತಮ್ಮ ಮಂತ್ರಿಗಳೂ ಸೇನಾಧಿಪತಿಗಳೂ ಜೈನರೇ ಆಗಿರುವರು ! ಈಗ ಅವರೇನದರೂ ಯುದ್ಧದಲ್ಲಿ ಕೈ ಕೊಟ್ಟರೆ ಸರ್ವನಾಶವಾಗ ದಿರದು !"ಎಂದು ಆಪ್ತರು ತೈಲಪನಿಗೆ ಸಲಹೆಯಿತ್ತರು.

"ಯಾರೊಡನೆ ಮಾತಾಡುತ್ತಿರುವಿರಿ ? ಚಾಲುಕ್ಯ ಸಾಮ್ರಾಜವನ್ನು ಕಟ್ಟಿದವರು ಜೈನರು. ನಾವು ಅರಸರಾದರೂ ಈ ಸಾಮ್ರಾಜ್ಯದ ಹಿತವನ್ನು ನಮಗಿಂತ ಅವರು ಚೆನ್ನಾಗಿ ಬಲ್ಲರು. ಜೈನರಲ್ಲಿ ರಾಷ್ಟ್ರದ್ರೋಹವಗಲಿ ಮತೀಯ ದುರಭಿಮಾನವಾಗಲಿ ಎಂಥ ಕಾಲದಲ್ಲೂ ಕಾಣೆವು. ತಮ್ಮ ಅಭಿಪ್ರಾಯ ತಮ್ಮಲ್ಲೇ ಇರಲಿ. ಎಲ್ಲಾದರೂ ಬಾಯಿ ಬಿಟ್ಟೀರ" ಎಂದು ತೈಲಪ ತನ್ನ ಆಪ್ತರ

ಬಾಯಿ ಮುಚಿವಿಸಿದನು. ಅವರಸವರಸರವಾಗಿ ದಲ್ಲಪನನ್ನೂ ಮಲ್ಲಪನನ್ನೂ ಮಂತ್ರಾಲೋಚನೆಗೆ ಕರೆಸಿಕೊಂಡನು.

"ಈಗ ರಾಷ್ಟ್ರ ಕೂಟರ ಮೇಲೆ ನಾವು ಯುದ್ಧಕ್ಕೆ  ಹೊರಡಬೇಕಾಗಿದೆ. ನಿಮ್ಮಲ್ಲಿ ಒಬ್ಬರು ರಾಜದಾನಿಯಲ್ಲಿದ್ದು ಇನ್ನೊಬ್ಬರು ರಣರಂಗಕ್ಕೆ ಹೊರಡಬೇಕು" ಎಂದು ತೈಲಪ ಆದೇಶವಿತ್ತನು.

"ಪ್ರಭುಗಳು ತಪ್ಪು ತಿಳಿದುಕೊಳ್ಳುವುದಿಲ್ಲವೆಂದರೆ ನಾನು ಮನಬಿಚ್ಚಿ ಮಾತಾಡುವೆನು" ಎಂದು ದಲ್ಲಪ ಸಂಕೋಚಗೊಂಡು ನುಡಿದನು.

"ದಲ್ಲಪ ನೀವು ಮಂತ್ರಿಯಾದರೂ ವಯಸ್ಸಿನಲ್ಲೂ ಘನತೆಯಲ್ಲೂ ನನಗೆ ತಂದೆಯಂತಿರುವಿರಿ. ತಮ್ಮ ಅಭಿಪ್ರಾಯವನ್ನು ಸಂಕೋಚಗೊಳ್ಳದೆ ನುಡಿಯ ಬಹುದು."

"ಪ್ರಭು, ಈಗಿನ ಯುದ್ಧ ಜಟಿಲವಾದುದು, ಯುದ್ಧವೆಂದ ಮೇಲೆ ಸೋಲು ಗೆಲವು ಎರಡಕ್ಕೂ ನಾವು ಸಿದ್ಧವಿರಬೇಕು. ಗೆದ್ದರೆ ಪರವಾಗಿಲ್ಲ .ಏನಾದರೂ ಸೋತೆವಾದರೆ ಲೋಕವೆಲ್ಲ ನಮ್ಮನ್ನು ದೂಷಿಸದಿರದು" ಎಂದು ದಲ್ಲಪ ಮಾತನ್ನು ಅರ್ಧಕ್ಕೆ ನಿಲ್ಲಿಸಿದನು.

"ದಲ್ಲಪ ,ನಿಮ್ಮ ಮನಸ್ಸಿನಲಿರುವ ಸಂದೇಹವನ್ನು ಪೂರ್ತಿ ಹೇಳಬಿಡಿ."

"ಈಗ ತಮ್ಮ ಪ್ರಮುಖ ಅಧಿಕಾರಿಗಳೆಲ್ಲ ಜೈನರೇ ಆಗಿರುವರು ! ಸೇನೆಯೆಲ್ಲಾ ನನ್ನ ಮಗನ ಅಧೀನದಲ್ಲಿದೆ.ಹೆಚ್ಚುಕಡಿಮೆಯಾದರೆ ಜೈನರಾದ ನಮಗೆಲ್ಲ ಅಪಮಾನವಾಗುವುದು. ಬೇಕೆಂದೇ ರಾಷ್ಟ್ರಕೂಟರ ಕಡೆ ಇವರು ಒಳಸಂಚು ನಡೆಸಿದರೆಂದು ನಮ್ಮ ಮೇಲೆ ಅಪವಾದ ಹೊರಿಸುವರು. ರಾಷ್ಟ್ರಕೂಟರು ಜೈನರು. ಅವರ ನೆರವಿಗೆ ಬರುವ ಗಂಗರೂ ಜೈನರೆ. ಈಗ ಅವರೊಡನೆ ಹೋರಾಟಕ್ಕೆ ಹೊರಡುವ ನಾನು ಮತ್ತು ನನ್ನ ಮಗ ಇಬ್ಬರೂ ಜೈನರೇ ! ಅದಂರಿದ ಕೆಲದಿನದ ಮಟ್ಟಿಗಾದರೂ ಮಂತ್ರಿಪದವಿಗಳನ್ನೂ ಸೈನ್ಯಾಧಿಕಾರವನ್ನೂ ಜೈನರಿಂದ ತಪ್ಪಿಸಿಬಿಡಿ. ನಮ್ಮನ್ನು ಅಪವಾದದಿಂದ ಮುಕ್ತಗೊಳಿಸಿಬಿಡಿ" ಎಂದು ದಲ್ಲಪ ಅಂಗಲಾಚಿದನು.

"ಮಲ್ಲಪ, ತಮ್ಮ ಅಭಿಪ್ರಾಯವೇನು ?" ಎಂದು ತೈಲಪ ಅವನ ಕಡೆ ತಿರುಗಿ, ತೂಗುವಂತೆ ನೋಡಿದನು.

"ಪ್ರಭು, ನನ್ನ ತಮ್ಮ ತಮಗಾಗಿ ಪ್ರಾಣತೆತ್ತಿರುವನು, ನಾನು ನನ್ನ ಮಕ್ಕಳೂ ಚಾಲುಕ್ಯ ಸಾಮ್ರಾಜ್ಯದ ಸೇವಕರು. ಆದರೂ ಈಗಿನ ಪರಿಸ್ಥಿತಿ ಬಿಗಾಡಾಯಿಸಿದೆ. ನನ್ನ ಮಾತನ್ನು ಕೇಳುವುದಾದರೆ ಜೈನ ಅಧಿಕಾರಿಗಳನ್ನೆಲ್ಲ ಈಗ ನಿರ್ಬಂಧದಲ್ಲಿರಿಸಿ ತಾವುಯುದ್ಧಕ್ಕೆ ಹೋಗುವುದು ಮೇಲು. ಯಾವ ಕಾಲಕ್ಕೆ ಏನು ಪ್ರಲೋಭವೊ ಕಂಡವರಾರು?" ಎಂದು ಮಲ್ಲಪ ತನ್ನ ಅಮೂಲ್ಯ ಸಲಹೆಯಿತ್ತನು.

"ನೀವಿಬ್ಬರೂ ಒಳ್ಳೆಯ ತನ್ನ ಬೀಗರು. ಸಚಿವೋತ್ತವರು ! ಅಮೂಲ್ಯವಾದ ಸಲಹೆ !" ಎಂದು ವ್ಯಂಗ್ಯವಾಗಿ ನುಡಿದು ತೈಲಪ ಕೈಚಪ್ಪಾಳೆ ತಟ್ಟಿ ನಕ್ಕನು.

"ದಲ್ಲಪ, ನಾನು ಮೊದಲೇ ಹೇಲಿರುವೆನು .ನೀವು ನನ್ನ ಸಾಕುತಂದೆ. ಮಲ್ಲಪ ನನ್ನ ಚಿಕ್ಕತಂದೆ. ನಿನ್ನ ಮಗ ನಾಗದೇವ ನನ್ನ ಸೋದರ . ನಿಮಗೆ ಈಗ ಯುದ್ಧಕ್ಕೆ ಹೋಗುವ ಮನಸ್ಸಿಲದಿದ್ದರೆ ನನ್ನನ್ನೇ ಸೆರೆಯಲ್ಲಿ ನೂಕಿಬಿಡಿ. ಚಾಲುಕ್ಯ ಸಾಮ್ರಾಜ್ಯವನ್ನು ರಾಷ್ಟ್ರಕೂಟರಿಗೆ ಒಪ್ಪಿಸಿ ಬನ್ನಿ ! ಅವರಿವರ ನೆರವಿನಿಂದ ನನಗಾಗುವ ಜಯಲಾಭಕ್ಕಿಂತ ನನ್ನನ್ನು ಮುಂದಕ್ಕೆ ತಂದು ಮಹಾರಾಜನೆಂದು ಕೊಂಡಾಡಿದ ನೀವೆಲ್ಲ ಸೇರಿಕೊಂಡು ನನ್ನನ್ನು ಕೆಡಿಸುವುದಾದರೆ ಆಕೇಡೇ ನನ್ನ ಪಾಲಿನ ಮಹಾಭಾಗ್ಯವೆಂದು ಸ್ವೀಕರಿಸುವೆನು. ಈಗ ಯುದ್ಧ ಅನಿವಾರ್ಯ. ಯಾವ ಅಧಿಕಾರವನ್ನೂ ನಾನು ಈ ಸಂದರ್ಭದಲ್ಲಿ ಹಸ್ತಾಂತರಗೊಳಿಸಲಾರೆ. ಉಳಿಸುವುದಾದರೆ ಉಳಿಸಿ ಅಥವಾ ನನ್ನನ್ನು ಕೆಡಿಸುವುದದರೆ ಕೆಡಿಸಿ" ಎಂದು ತೈಲಪ ನುಡಿದು ತಲೆಭರವಾದವನಂತೆ ಎದ್ದು ಹೊರಟು ಹೋದನು.

ನಾಗದೇವ ಮಹಾ ಸಾಹಸಿ. ಆನೆಯ ಮೇಲೆ ಬಿದ್ದು ಗದೆಯಿಂದ ಅಪ್ಪಳಿಸಿ ಅದರ ಕುಂಭಸ್ಥಳವನ್ನು ಸೀಳಿದ ನಾಗದೇವನಿಗೆ ತೈಲಪ ಮಹಾರಾಜ, ತುಂಬಿದ ಸಭೆಯಲ್ಲಿ, "ಒರಟರಮಲ್ಲ" ಎಂದು ಬಿರುದು ಕೊಟ್ಟನು .ನಾನಾ ಯುದ್ಧಗಳಲ್ಲಿ ತೈಲಪನಿಗೆ ನೆರವಾಗಿ ಇವನು ಹೋರಾಡಿ ಗೆಲುವನ್ನು ತಂದಿದ್ದನು. ಒಮ್ಮೆ ಕೊಮರರ ಕಾಳಗ ಬಿರುಸಾಗಿ ನಡೆಯಿತು. ತೈಲಪನ ಸೇನೆ ಹಿಮ್ಮೆಟ್ಟಿತು. ಆಗ ಒಂದು ತುಕಡಿಗೆ ಅಧಿಪತಿಯಾದ ನಾಗದೇವನನ್ನು ಕರೆದು ತೈಲಪ ಸಮಸ್ತ ಸೇನಧಿಪತಿಯನ್ನಾಗಿ ಮಾಡಿದನು. ಯುದ್ಧದ ಗತಿಯೇ ಮಾರ್ಪಡುವಂತೆ ನಾಗದೇವ

ಹೋರಾಡಿದನು. ಜ್ವಾಲಾಮುಖಿಯಾಗಿ ವಿಜೃಂಭಿಸಿದನು ! ಎದುರಾದ ಶತ್ರುಪಕ್ಷದ ಗಜಘಟೆಯನ್ನು ಒಂದೆರಡು ಘಳಿಗೆಯಲ್ಲಿ ಬಾಳಯಕಂದನ್ನು ಕತ್ತರಿಸುವಂತೆ ಕತ್ತರಿಸಿ ಹಾಕಿದನು ! ಈತನ ಭೀಷಣ ರೂಪವನ್ನೂ ಭೀಕರ ಹೋರಾಟವನ್ನೂ ಕಂಡು ಶತ್ರುಪಕ್ಷ ಇವನ ಮೇಲೆ ಆನೆಗಳನ್ನು ಬಿಟ್ಟರು. ಅವು ಗೀಳಿಡುತ್ತ ಸೊಂಡಿಲನ್ನು ಚಾಚಿ ನಾಗದೇವನನ್ನು ಹಿಡಿಯಲು ಸುತ್ತುಗಟ್ಟಿದವು. ಅಗ್ನಿಪರ್ವತ ಗಿರ್ರನೆ ತಿರುಗುವಂತೆ ನಾಗದೇವ ಕತ್ತಿಯನ್ನು ಸುತ್ತಲೂ ಆಡಿಸುತ್ತ ಗರತಿಪ್ಪಾಳೆ ಆಡಿ ತನ್ನ ಮೇಲೆ ಏರಿ ಬಂದ ಗಜಘಟೆಯನ್ನು ನಿರ್ವೀರ್ಯಗೊಳಿಸಿದನು. ಈತನ ಕತ್ತಿಗೆ ಕೈಹಾಕಲು ಬಂದ ಆನೆಗಳು ಕರವಾಳದ ಅಗ್ನಿ ಚುಂಬನಕ್ಕೆ ಸಿಕ್ಕಿ ಸೊಂಡಿಲನ್ನು ಕಳೆದುಕೊಂಡು ರಣಭೂಮಿಯಲ್ಲಿ ಬಿದ್ದು ಒದ್ದಾಡಿದವು ! ಕೊಮರ ಕಾಳಗದಲ್ಲಿ ತೈಲಪನಿಗೆ ಜಯವಧು ಹಾಕಿದಳು ! ಅಂದಿನಿಂದ ನಾಗದೇವನನ್ನು 'ದಿಗ್ಗಜ'ವೆಂದು ಕರೆದು ಚಾಳುಕ್ಯ ಚಕ್ರವರ್ತಿ ಗೌರವಿಸಿದನು.

ದಿನ ಕಳದಂತೆ ನಾಗದೇವನ ಸ್ಥಾನಮಾನ ಹೆಚ್ಚುತ್ತಾ ಹೋಯಿತು. ಪಂಚಲ ಸೇನಾ ಸಗರವನ್ನು ಈ ನಾಗದೇವ ಎದುರಿಸಿದಾಗ ಬಡಬಾಲವಗಿ ವಿಜೃಂಭಿಸಿದನು ! ಕರಹಟದಲ್ಲಿ ಮಲ್ಲಪನನ್ನು ಎದುರಿಸಿ ನಾಗದೇವ ಸುಭಟ ತ್ರಿಣೇತ್ರನಾಗಿ ಆಟೋಪವೆಸಗಿದನು !ಇವನು ಅಡಿಯಿಟ್ಟ ಕಡೆ ಜಯಲಕ್ಷ್ಮಿ ಒಲಿದು ಬರಬೇಕಾಗಿತ್ತು. ಸೋಲನ್ನು ಎಂದೂ ಕಾಣದ ನಾಗದೇವನನ್ನು ದಿನಭೆಳಗಾದರೆ ಕೊಂಡಾಡಿ ತೈಲಪ ಅವನಲ್ಲಿ ಉತ್ಸಾಗವನ್ನೂ ರಾಜಭಕ್ತಿಯನ್ನೂ ಚಿಗುರೊಡೆಯುವಂತೆ ಮಾಡಿದನು.

* * * *

ದಲ್ಲಪನಿಗೂ ಮಲ್ಲಪನಿಗೂ ಪರೀಕ್ಷೆಯ ಕಾಲ ಒದಗಿ ಬಂದಿತು. ಸ್ವವತೀಯರಾದ ರಷ್ಟ್ರಕೂಟರನ್ನೂ ಅವರ ನೆರವಿಗೆ ನಿಂತ ಗಂಗರನ್ನೂ ಇವರು ಎದುರಿಸ ಬೇಕಾಗಿದೆ. ತಮ್ಮ ಮಕ್ಕಳನ್ನು ಕರೆಸಿಕೊಂಡು ಆಪ್ತಾಲೋಚನೆ ಮಾಡಿದರು. ಅವರ ಅಭಿಪ್ರಾಯವನ್ನು ಕೇಳಿದರು.

"ಅಪ್ಪಾಜಿ, ಯುದ್ಧದಲ್ಲೂ ಸೋದರೆ ಮಾವನೆ ? ಈ ಸಂದರ್ಭದಲ್ಲಿ ನಾವು ಕತ್ತಿಕೆಳಗಿಟ್ಟೆವೆಂದರೆ ಇದುವರಿವಿಗೂ ಸಾದಿಸಿದ್ದೆಲ್ಲ ನೀರಿನಲ್ಲಿ ಹೋಮ ಮಾಡಿದಂತಾಗುವುದು. ಮತಕ್ಕೂ ರಾಜಕೀಯಕ್ಕೂ ಏನು ಸಂಬಂಧ ? ಇದುವರಿವಿಗೂ ನಮ್ಮನ್ನು ಸಾಕಿ ಅನ್ನವಿತ್ತು

ಕಾಪಾಡಿದ್ದು ಚಾಲುಕ್ಯ ಸಾಮ್ರಾಜ್ಯವೇ ಹೊರತು ರಾಷ್ಟ್ರಕೂಟರಲ್ಲ ವಲ್ಲ ! ರಾಷ್ಟ್ರಸೇವೆ ಮಾಡುವ ಸದವಕಾಶ ಬಂದಿರುವಾಗ ಧರ್ಮದ ನೆಪವೊಡ್ಡಿ ಹಿಂಜರಿದರೆ ನಮಗೆ ಇಹವೂ ಇಲ್ಲ. ರಾಷ್ಟ್ರದ್ರೋಹ ಮಾಡು ಎಂದು ಜೈನಧರ್ಮದಲ್ಲಿ ಎಲ್ಲಾದರೂ ಹೇಳಿದೆಯೇ ? ವಿರೋಧಿಯನ್ನು ಧೀರನಾಗಿ ಎದುರಿಸಿ ಹೋರಾಡು ಎಂದು ಗೃಹಸ್ಥರಿಗೆ ಮಹಾವೀರ ಪ್ರಭು ಅಪ್ಪಣೆ ಕೊಟ್ಟಿರುವನು. ನಾನು ಸತ್ತೇನೇ ಹೊರತು ಸೋಲವನ್ನು ಅನಿಭವಿಸಲಾರೆ. ಉಂಡುಮನೆಗೆ ಎರಡು ಬಗೆದು ನರಕಕ್ಕಿಳಿಯಲೇನು ?” ಎಂದು ನಾಗದೇವ ಅಬ್ಬರಿದನು. ಮಲ್ಲಪನ ಮಕ್ಕಳೂ ಕರ್ತವ್ಯನಿಷ್ಠರು. ರಾಷ್ಟ್ರ ಮೊದಲು ಅನಂತರ ಉಳಿದುವೆಲ್ಲ ಎಂದು ಮಲ್ಲಪನ ಮಕ್ಕಳು ಒಟ್ಟಾಗಿ ರಾಷ್ಟ್ರಕೂಟರನ್ನು ಎದುರಿಸಲು ಪಣತೊಟ್ಟರು.

ಅತ್ತಿಮಬ್ಬೆ ಹೆತ್ತು ಒಂದು ವರ್ಷವಾಗಿದೆ. ಮನೆಯ ತುಂಬ ಬೀಸಣಿಗೆಯಾಗಿ ಅಣ್ಣಿಗದೇವ ಓಡಾಡಿಕೊಂಡಿರುವನು. ಒಮ್ಮೆ ಅಜ್ಜಿಯ ಬಳಿ ಬಂದು ಬೆನ್ನಿಗೆ ಕರೆದು ಅವನ ಹೆಗಲನ್ನೇರಿ ಚಪ್ಪಾಳೆ ತಟ್ಟಿ ಕೇಕೆ ಹಾಕುವನು. ಗುಂಡುಮಬ್ಬೆಯನ್ನೂ ಅತ್ತಿಮಬ್ಬೆಯನ್ನೂ ಅಮ್ಮಾ ಎಂದೇ ಕರೆದು ಎಲ್ಲರನ್ನೂ ನಗಿಸುವನು. ಪುಟ್ಟಹೆಜ್ಜೆ  ಹಾಕಿ ಅವನು ನಡೆವಿದನ್ನು ನೋಡುವುದೋ ಒಂದು ಚಂದ. ದಲ್ಲಪ ಬಂದಾಗಲೆಲ್ಲ ಕುದುರೆ ಆಟ ಆಡಿಸೆಂದು ಚಂಡಿಹಿಡಿಯುವನು. ಅವನು ಕುದುರೆಯಂತೆ ಬಗ್ಗಿ ಇವನನ್ನು ಬೆನ್ನಿನ ಮೇಲೆ ಕೂರಿಸಿಕೊಳ್ಳಬೇಕು, ಅನಂತರ ಪದ್ಮಬ್ಬೆ ಬಂದು ಇವನನ್ನು ಹಿಡಿದುಕೊಳ್ಳಬೇಕು. ಗುಂಡುಮಬ್ಬೆ ಮತ್ತು ಅತ್ತಿಮಬೆಯರು ಪ್ರೇಕ್ಷಕರಾಗಿ ನಿಂತು ನೋಡಬೇಕು ! ಆಗ ದಲ್ಲಪ ಕುದುರೆಯಂತೆ ನಗೆದಾಡಿ ಇವನನ್ನು ನಗಿಸಬೇಕು ! ಚಾಲುಕ್ಯ ಸಾಮ್ರಾಜ್ಯದ ಮಂತ್ರಿಗಳೂ ಸೇನಾಧಿಪತಿಗಳೆಲ್ಲ ಅಣ್ಣಿಗದೇವನ ಕುದುರೆಗಳಾಗಿ ಹೋಗಿರುವರು !ಒಮ್ಮೆ ತೈಲಪನ ಬಳಿಗೆ ಇವನನ್ನು ಕರೆದುಕೊಂಡು ಹೋದಾಗಲು ಮಹಾರಾಜನ್ನೇ ಕುದುರೆಯಾಗಬೇಕೆಂದು ಚಂಡಿ ಹಿಡಿದನು.ತಾಯ್ಗಿರುಳಾದ ತೈಲಪ ಅನಿವಾರ್ಯವಾಗಿ ಕುದುರೆಯಾಗಿ ಅಣ್ಣಿಗನನ್ನು ಕುಣಿಸಿದನು ! ಇವನು ಹುಟಿದ ಮೇಲೆ ದಲ್ಲಪನ ಮನೆ ಸಂತಸದ ಸುಗ್ಗಿಯಾಯಿತು. ನಗುವಿನ ಹೊಲೆಯಾಯಿತು. ಮನೆಯಲ್ಲಿ ಸರ್ವಧಿಕರಿಯೆಂದೆರೆ ಮಗುವೇ ! ಮಗುವಿನ ಸರ್ವಾಧಿಕಾರತ್ವಕ್ಕೆ ಯಾರೂ ಅಧಕ್ಕೆತರಲಾರರು ! ತಂದೆಯಾದವನು ರಾಜನಾಗಲಿ. ಮಂತ್ರಿಯಾಗಲಿ ಮಕ್ಕಳ ಮುಂದೆ ತಮ್ಮ

ಗಾಂಭೀರ್ಯವನ್ನು ಕಟ್ಟಿಟ್ಟು ಅದರ ಇಷ್ಟಾನು ಸಾರ ತಾನೂ ನಡೆದು ಮಗುವಿದೊಡನೆ ಮಗುವಾಗಿ ಆಡುವುದಕ್ಕಿಂತ ಬೇರೆ ರಸಮಯ ವಾತಾವರಣ ಇನ್ನಾವುದು ?

ಒಮ್ಮೆ ನಾಗದೇವ ಮನೆಗೆ ಬಂದವನೇ ತನ್ನ ಪತ್ನಿಯರನ್ನೂ ಮಗುವನ್ನೂ ಬಲವಂತವಗಿ ಉದ್ಯಾನಕ್ಕೆ ಕರೆದಿಕೊಂಡು ಹೋದನು.

"ಪ್ರಿಯ, ಈ ದಿನ ಏಯೋ ಒಂದು ರೀತಿ ಇದ್ದೀರಲ್ಲ !" ಎಂದು ಗುಂಡುಮಬ್ಬೆ ಕುತೂಹಲಚಿತ್ತಳಾಗಿ ಕೇಳಿದಳು.

"ಹೌದು ಪ್ರಿಯೆ, ಜಟಿಲವಾದ ಸಮಸ್ಯೆ ಎದುರಾಗಿದೆ."

"ಸಮೆಸ್ಯೆ !ತಮಗೂ !" ಎಂದು ಅತ್ತಿಮಬ್ಬೆ ಸೋಜಿಗಗೊಂಡಳು.

"ರಾಷ್ಟ್ರಕೂಟರ ಮೇಲೆ ಯುದ್ಧಕ್ಕೆ ಹೊರಡಬೇಕು. . . . ."

"ತಿಮ್ಮಿಂಗಿಲ್ಲಕ್ಕೂ ನೀರಿನ ಭಯವೇ ?" ಎಂದು ಗುಂಡುಮಬ್ಬೆ ಅಚ್ಚರಿಗೊಂಡಳು.

"ಚಾಮುಂಡರಾಯನನ್ನು ಎದುರಿಸಬೇಕಾಗುವುದು !" ಎಂದು ನಾಗದೇವ ಯೋಚನಮಗ್ನನಾದನು.

"ಸಂಧಾನ ಮಾಡಿದರಾಗೆದೆ ?" ಅತ್ತಿಮಬ್ಬೆ ಸಲಹೆಯಿತ್ತಳು.

"ಆ ಪ್ರಣಕಣ ಮುಗಿಯಿತು. ನನ್ನನ್ನು ರಾಷ್ಟ್ರ ಕೂಟರೆ ಕಡೆ ಸೆಳೆಯಲು ವಿಶ್ವಪ್ರಯತ್ನ ವೆಸಗುತ್ತಿರುವರು ನಾನಾ ಪ್ರಲೋಭಗಳನ್ನು ತೋರುತ್ತಿರುವರು .ಕೊನೆಗೆ ಒಂದು ಪ್ರಾಂತಕ್ಕೆ ರಾಜನನ್ನು ಮಾಡುತ್ತೇವೆಂದು ಗಾಳಬೀಸಿರುವರು . . . ." ಎಂದು ನಾಗದೇವ ತುಸುತಡೆದನು.

"ತಾವು ಅದಕ್ಕೆ ಏನು ಹೇಳಿರಿ ?" ಗುಂಡುಮಬ್ಬೆ ಕುತೂಹಲಗೊಂಡಳು.

"ನಿಮ್ಮಿಂಬರ ಸಲಹೆ ಕೇಳಲು ಬಂದಿರುವೆನು ."

"ಪ್ರಿಯ, ಸಲಹೆ ಕೇಳುವುದಕ್ಕೆ ಇದೇನು ಜಟಿಲವಾದ ಸಮಸ್ಯೆಯಲ್ಲವಲ್ಲ ! ಯಾರಾದರೂ ನಿಮಗೆ ಇಬ್ಬರು ಸುರಸುಂದರಿಯರಂಥ ಮಡದಿಯರಿರುವರು . ಅವರಲ್ಲಿ ಬಬ್ಬಳನ್ನು ನನಗೆ ಕೊಡಬಾರೆದೆ ಕಟ್ಟಿಕಿಯಾಡಿದಳು.

“ದೇವ, ನಾವು ನಂಬಿದವರನ್ನು ಕೈಬಿಟ್ಟು ಶತ್ರುಪಕ್ಷ ಸೇರಿದರೆ ದೇವರು ಮೆಚ್ಚಿಯಾನೆ ? ನಮ್ಮ ವಂಶ ಉಳಿದೀತೆ ?ಅವರು ಕೊಡುವ ರಾಜ್ಯ ಆಚಂದ್ರಾರ್ಕವೇ ? ಶತ್ರುಗಳಿಗೆ , ಬೀಸುವ ಕತ್ತಿ ತಪ್ಪಿದ ಮೇಲೂ ನಿಮ್ಮ

ಮೇಲೆ ಗೌರವ ಉಳಿದೀತೆ ?”ಎಂದು ಆಕೆ ಪ್ರಶ್ನೆಗಳ ಈಟಿಯಿಂದ ನಾಗದೇವನನ್ನು ತಿವಿದಳು.

“ರಮಣ, ಯರೊಬ್ಬ ಸಲಹೆಯನ್ನೂ ಕೇಳದೆ ನಾಳೆಯೆ ಯುದ್ಧಕ್ಕೆ ಹೊರಟು ಬಿಡಿ. ತಾಯ್ನಾಡಿಗಾಗಿ ಸರ್ವತ್ಯಾಗಕ್ಕೂ ನಾವು ಸಿದ್ಧರಾಗಿರುವೆವು. ಸತ್ತರೆ ಸ್ವರ್ಗ ಉಳಿದರೆ ರಾಜ್ಯ. ಅಳಿಯಲಿ ಉಳಿಯಲಿ ತಾವು ಅಜರಾಮರರಾಗಿ ರಾರಾಜಿಸುವಿರಿ ! ತಾವು ಹೇಡಿಯಾದರೆ ಇಲ್ಲವೇ ವಿದ್ರೋಹಿಗಳಾದರೆ ಕೆಡುವವರು ತಾವೊಬ್ಬರೇ ಅಲ್ಲ ತಮ್ಮ ಪೀಳಿಗೆಯೇ ಅಪಕೀರ್ತಿಗೆ ಗುರಿಯಾಗುವುದು !” ಎಂದು ಗುಂಡುಮಬ್ಬೆ ಕಡ್ಡಿತುಂಡಾಗುವಂತೆ ನುಡಿದಳು.

“ರಮಣ, ಯಾವ ಚಿಂತೆಯನ್ನೂ ಮನಸ್ಸಿಲ್ಲಟ್ಟುಕೊಳ್ಳದೆ ಯುದ್ಧಕ್ಕೆ ಹೊರಟು ಬಿಡಿ. ತಾವು ಒರಟರಮಲ್ಲ ! ಚಲುವೆಯರಾದ ನಮ್ಮನ್ನು ಕಟ್ಟಿಕೊಂಡ ಹೊರೆಟು ಬಿಡಿ. ತಾವು ಒರಟರಮಲ್ಲ ! ಚಲುಮೆಯರಾದ ನಮ್ಮನ್ನು ಕಟ್ಟಿಕೊಂಡ ಮಾತ್ರಕ್ಕೆ ತಾವು ಅಲಂಕಾರ ಪುಟ್ಟಶಾಮಿಯಾಗಬೇಕೆ ? ನೀವು ಬೊಸಸೆಗಂಗಳಲ್ಲಿ ಕಾಣುವ ನಮ್ಮ ತಾವು, ದಿಗ್ಗಜವಾದ ತಾವು ರಣರಂಗಕ್ಕೆ ಬೆಚ್ಚುವ ಕಾರಣವಿಲ್ಲವಲ್ಲ !” ಎಂದು ಅತ್ತಿಮಬ್ಬೆ ಅವನಲ್ಲಿ ಉತ್ಸಾಹವನ್ನು ತುಂಬಿದಳು.

ಈ ದಂಪತಿಗಳು ಮಗುವಿನೊಡನೆ ಹೊವಿನಿಂದ ಅಡ್ಡಾಡುವ ದುಂಬಿಯಂತೆ ಉದ್ಯಾನದಲ್ಲಿ ಚಕ್ಕಂದವಡುತ್ತ ಓಡಾಡಿದರು. ಕೋಗಿಲೆಯಂತೆ ಕೂಗಿ ಆತ್ತಿಮಬ್ಬೆ ಎಲ್ಲರನ್ನೂ ಬೆರಗುಗೊಳಿಸಿದಳು. ನವಿಲಿನಂತೆ ನಟಿಸಿ ಗುಂಡುಮಬ್ಬೆ ತನ್ನ ಗಂಡನನ್ನು ನಗಿಸಿದಳು. ರಸೋಲ್ಲಾಸವನ್ನು ಅನುಭವಿಸುತ್ತ ಮೂವರೂ ಜಿನಾಲಯಕ್ಕೆ ಹೋಗಿ ಭಕ್ತಿಯಿಂದ ಹಿಂದಿರುಗಿದರು.

ಅಂದಿನ ರಾತ್ರಿಯನ್ನೆಲ್ಲ ಸಂಗೆತದಲ್ಲಿ, ನರ್ತನದಲ್ಲಿ ಕಳೆದರು. ಕುಸುಮವನ್ನು ಕೆದರಿದಂತೆ ಅತ್ತಿಮಬ್ಬೆ ವೀಣೆಯನ್ನೆಲ್ಲ ನುಡಿಸಿದಾಗ ಅಲೆಅಲೆಯಾಗಿ ನಾದತರಂಗವೆದ್ದು ಬೆಳ್ದಿಂಗಳನ್ನು ಸುರಿಸುವಂತೆ ಮೋಹಕವಾಗಿತ್ತು. ! ಅನಂತರ ಅಕ್ಕತಂಗಿಯರಿಬ್ಬರೂ ನರ್ತನಮಾಡಿದರು,

ಜೋಡಿಪಾರಿವಾಳಗಳಂತೆ ಹಾರಾಡಿದರು. ಹರಿವ ನದಿಯಂತೆ ಹರುದಾಡಿದರು. ಎಳೆಬಿಸಿಲಿನಲ್ಲಿ ಒಲೆದಾಡುವ ಎಳನಾಗರವಾಗಿ ಓಲಾಡಿದರು !

"ಅತ್ತಿ, ನಿಮ್ಮಿಬ್ಬರ ಕಲೆಯನ್ನು ಪೂರ್ಣವಾಗಿ ಸನಿಯಲು ಒಂದು ಜನುಮ ಸಾಲದಲ್ಲ !" ಎಂದು ನಾಗದೇವ ಕೈ ಕೈ ಹಿಸುಕಿಕೊಂಡನು.

"ಅದರಿಂದಲೇ ಜನುಮಜನುಮಕ್ಕೂ ನಮಗೆ ನೀವೇ ಪತಿಯಾಗಬೇಕೆಂದು ನಾವು ಬೇಡುತ್ತಿರುವೆವಲ್ಲ !" ಎಂದು ಗುಂಡುಮಬ್ಬೆ ನಗೆಯಾಡಿದಳು.

"ಗುಂಡು, ಅಕ್ಕನಿಗೂ ಮಗುವಾಯಿತು. ನಿನಗೆ ?" ಎಂದು ನಾಗದೇವ ಮುಗುಳ್ನಕ್ಕನು.

"ನನಗೂ ಅಕ್ಕನಿಗೂ ತಾವೊಬ್ಬರೇ ಪತಿಯಾಗಿಲ್ಲವೇ ? ಅದೇ ರೀತಿ ನಮ್ಮ ಅಣ್ಣಿಗೆ ನಮ್ಮಿಬ್ಬರಿಗೂ ಮಗುವಾಗಿರುವನಲ್ಲ ! ಈಗಲೂ ನಮ್ಮಲ್ಲಿ ಅತ್ತಿಯಾರು, ಗುಂಡು ಯಾರು ಎಂದು ಅವನು ಗುರುತು ಹಿಡಿಯಲಾರ !" ಎಂದು ಗುಂಡುಮಬ್ಬೆ ನಿಶ್ಚಿಂತಳಾಗಿ ನುಡಿದಳು.

"ರಮಣ ,ನಾಳೆ ಯುದ್ಧಕ್ಕೆ ಹೊರಡಬೇಕಾಗಿದೆ. ಇನ್ನಾದರೂ ಮಲಗಿ ವಿಶ್ರಮಿಸಿ ಕೊಳ್ಳಬಾರದೆ ?" ಎಂದು ಅತ್ತಿಮಬ್ಬೆ ಕನಿಕರ ತೋರಿದಳು.

"ಅತ್ತಿ, ನೀನು ತಂಗಾಳಿ ! ನಮ್ಮ ಗುಂಡು ಬೆಳದಿಂಗಳು, ನಮ್ಮ ಅಣ್ಣಿಗೆ ವಸಂತಋತು ! ಈ ಸನ್ನಿವೇಶದಲ್ಲಿ ಯಾರಿಗೆ ನಿದ್ದೆ ಹತ್ತೀತು ? ನಿದ್ದೆಯಾದರೂನಿಮ್ಮಿಬ್ಬರಿಗಿಂತ ಹಿತವಾದುದೇನು ?"

"ಈಗೇನ್ನೋ ಆಯಾಸ ಕಾಣುವುದಿಲ್ಲ .ನಮ್ಮನ್ನಗಲಿದ ಮೇಲೆ ?" ಎಂದು ಗುಂಡುಮಬ್ಬೆ ಕೇಳಿದಳು.

" ಗುಂಡು, ಮನೆಯಲ್ಲಿದ್ದುಗ ನಾನೊಂದು ಮಗು ! ರಣರಂಗಕ್ಕೆ ಅಡಿಯಿಟ್ಟೆ ನೆಂದರೆ ಹಿಂದುಮುಂದನ್ನು ಮರೆತುಬಿಡುವೆನು. ಜ್ವಾಲಾಮುಖಿಯಾಗಿ ಉರಿದುಬಿಡುವೆನು. ನೀವಿಬ್ಬರೂ ವೀಣೆ ಹಿಡಿದಾಗ ಲೋಕವನ್ನು ಮರೆತಂತೆ ನಾನು ಬಿಲ್ಲು ಹಿಡಿದಾಗನಲ್ಲೆಯರನ್ನೂ ಮರೆತುಬಿಡುವೆನು. ಕತ್ತಿಹಿರಿದಾಗ ಎಲ್ಲವನ್ನೂ ಮರೆತು ನರಮೇಧವ ನ್ನಾಚರಿಸುವೆನು !" ಎಂದು ನಾಗದೇವ ವೀರಾವೇಶಗೊಂಡು ನುಡಿದನು.

“ಬೆಳಗಿನಜಾವ ಆದಂತಿವೆ. ತಂಗಾಳಿ ಬೀಸುತ್ತಿದೆ. ಸ್ವಲ್ಪವಾದರೂ ವಿಶ್ರಮಿಸಿಕೊಳ್ಳಿ ಅಂದರೆ. . . ” ಎಂದು ಅತ್ತಿಮಬ್ಬೆ ತನ್ನ ಗಂಡನ ತಲೆ ನೇವರಿಸಿ ತಿಳಿಸಿದಳು.

“ಅತ್ತಿ, ನಿದ್ದೆಗೆಡುವುದು, ಉಪವಸಗ್ಗಿರುವುದು ನನಗೇನೂ ಹೊಸದಲ್ಲ .ವಾರ ಗಟ್ಟಲೆ ನಿದ್ದೆ ಕೆಡಬಲ್ಲೆ. ಅನ್ನ ನೀರು ಕೇಳದೆ ಹೋರಾಡಬಲ್ಲೆ. ಮಾರವಾಡಿಗೆ ವ್ಯಾಪಾರ ಮಾಡುತ್ತಿದ್ದರೆ ಇನ್ನೇನೂ ಬೇಕಾಗುವುದಿಲ್ಲ, ಮಾರವಾಡಿಗೆ ಜೋತೆಯ ಲಿರುವಾಗ ಇನ್ನೇನು ಬೇಕು ?ಅತ್ತಿ ನೀನೇ ನನ್ನ ನಿದ್ದೆ, ಗುಂಡು ನೀನೇ ನನ್ನ ಅನ್ನ, ನಮ್ಮ ಪುಟ್ಟು ಅಣ್ಣಿಗನೇ ನೀರು !” ನಾಗದೇವ ರಸಿಕನಾಗಿ ಮಾತಿನ ಮಳೆಗರೆದನು.

“ಓಹೋ ಕವಿಯಾಗುತ್ತಿರುವಿರಿ !” ಎಂದು ಗುಂಡುಮಬ್ಬೆ ನಗೆಯಾಡಿದಳು.

“ ನಾನು ಕವಿಯೂ ಅಹುದು, ಕಲಿಯೂ ಅಹುದು” ಎಂದು ನಾಗದೇವ ಹೆಮ್ಮೆಯಿಂದ ನುಡಿದನು. ಆ ರಾತ್ರಿಯನ್ನೆಲ್ಲ ಇದೇ ರೀತಿ ಚಕ್ಕಂದವಾಡಿ ಕಳೆದರು. ಇಂಥ ರಾತ್ರಿ ಜೀವನದಲ್ಲಿ ಒಂದರೆಡು ಸಿಕ್ಕಿದರು ಬಾಳು ಸಾರ್ಥಕವೆಂದು ನಾಗದೇವ ತನ್ನ ನಲ್ಲೆಯರನ್ನು ಮುದ್ದಾಡುತ್ತ ತಿಳಿಸಿದನು. ಇವರ ಚಕ್ಕಂದದ ನಡುವೆಯೇ ಅರುಣೋದಯವೂ ಅಯಿತು. ಕಿರುಣೋದಯವೂ ಆಯಿತು. “ಬಬ್ಬ ಸುಂದರಿ ಜೊತೆಯಾದ ರೇನೆ ನಿದ್ದೆ ಹೇಳದೆ ಕೇಳದೆ ಜಾಗಬಿಡುವುದು. ಇನ್ನು ಇಬ್ಬರು ಸೇರಿಕೊಂಡರೆ ?” ಎಂದು ನಾಗದೇವ ಮಾರ್ವಿಕವಾಗಿ ನುಡಿದು ಮೇಲೆದ್ದನು.

ಚಾಲುಕ್ಯಸೇನೆ ಸಮರೋನ್ಮಾದದಿಂದ ರಣಮುಖವಾಯಿತು. ಆಗಸ ಬಿರಿಯು ವಂತೆ ರಣಭೇರಿ ಮೊಳಗಿದವು. ಒಂದೊಂದು ಆನೆಯೂ ದಿಗ್ಗಜವೋ ಏನೋ ಎಂಬಂತಿದ್ದ ಸಹಸ್ರಾರು ಆನೆ ಹಿಂಡು ಎಣ್ಣೆಯಲ್ಲಿ ಮುಂದು ಮೈ ಕೊಡವಿಕೊಂಡು ಗೀಳಿಟವು. ಸಮುದ್ರದಲ್ಲಿ ತರಂಗಮಾಲೆಯೆದ್ದಂತೆ ಕಾಣುವ ಸಾಲ್ಗುದುರೆಯ ಗುಂಪು ಕಂಗೊಳಿಸಿತು. ಸೈನ್ಯದ ತೊತ್ತಳ ತುಳಿತದಿಂದ ಎದ್ದ ಕೆಂಧೂಳು ಆಗಸವನ್ನೆಲ್ಲ ಮುಚ್ಚಿ ದಿಕ್ಕುಗಳೇ ದಿಕ್ಕೆಟ್ಟವು ! ಶಸ್ತ್ರಕೋಟಿಗಳು ಕೋರೈಸಿದವು. ಬಿಲ್ಲುಗಳು ಬೆದೆ ಬಂದಂತಾಡಿದವು ! ಬತ್ತಳಿಕೆಗಳಿಗೆ ಮೈದುಂಬಿದಂತಾಯಿತು ! ಚತುರಂಗ ಸೈನ್ಯವೂ ಮಾನ್ಯಕೇಟವನ್ನು ಹಾತೊರೆಯುತು.

ನಾಗದೇವ, ಸೇನಾನಿ ಉಡುಪನ್ನು ಧರಿಸಿಕೊಂಡೇ ಮನೆಗೆ ಬಂದನು. ಹಿರಿಯರಿಗೆಲ್ಲ ಅಡ್ಡಬಿದ್ದು ಆಶೀರ್ವಾದ ಪಡೆದನು. ಜಿನಗಂಧೋದಕವನ್ನು ಇವನ ತಲೆಗೆ ರಕ್ಷಮಣಿ ಯಂತೆ ಚಿಮುಕಿಸಿದರು. ಹಿರಿಯರ ಪಾದಧೂಳಿಯನ್ನು ತೆಗೆದು ನಾಗದೇವ ಹಣೆಗಿಟ್ಟು ಕೊಂಡನು. ಇವನನ್ನು ಬೀಳ್ಕೊಡುವಾಗ ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ಆರತಿಯೆತ್ತಿ ವೀರಗೇತವನ್ನು ಹಾಡಿದರು. ವೀರಾಕ್ಷತೆಯಿಟ್ಟರು. ದೃಷ್ಟಿಪರಿಹಾರಕ್ಕಾಗಿ ಇಡುಗಾಯಿ ಹಾಕಲು ಹೋದಾಗ ನಾಗದೇವ ತೆಂಗಿನ ಕಾಯಿಯನ್ನು ತನ್ನ ಕೈಗೆ ತೆಗೆದುಕೊಂಡು ಎರಡು ಹಸ್ತದ ನಡುವೆ ಅದನ್ನು ಸೇರಿಸಿಕೊಂಡು ಬಲವಾಗಿ ಅದುಮಿದನು. ಚಿಪ್ಪೊಡೆದು ತೆಂಗಿನಕಾಯಿ ನಜ್ಜೀಬಿಜ್ಜಿಯಾಗಿ ನೀರೆಲ್ಲ ಸೋರಿತು ! ಈ ದೃಶ್ಯವನ್ನು ಕಂಡು ಪದ್ಮಬ್ಬೆ ಹರ್ಷಚಿತ್ತಳಾಗಿ "ಅತ್ತಿ, ನೋಡು ನಿನ್ನ ಗಂಡನ ಶಕಿ ಸಂಪನತೆಯನ್ನು !" ಎಂದು ಹೆಮ್ಮೆಯಿಂದ ತೀಳಿಸಿದಳು.

"ತಾವು ಬಾಹುಬಲಿಯಂತೆ ಅಭಿಮಾನಧರಾಗಬೇಕು. ನಿದಾಕ್ಷಿಣ್ಯದಿಂದ ಶತ್ರುವನ್ನು ನಿಗ್ರಹಿಸಿ ಕೀತೀಗಳಿಸಿಕೊಂಡು ಬನ್ನಿ" ಅತ್ತಿಮಬ್ಬೆ ಗಂಡನ ತೋಳ ತೀಟೆಯನ್ನು ಉದ್ರೇಕಿಸಿದಳು.

"ಲೋಕೈಕವೇರನಾದ ಅರ್ಜುನನಂತೆ ಕಾಣುತ್ತಿರುವಿರಿ ! ಅರ್ಜನನಿಗೂ ಸೋಲಿಲ್ಲ ತಮಗೂ ಸೋಲಿಲ್ಲ .ಕದನ ತ್ರೀಣೇತ್ರರಾದ ತಾವು ಅರಿವರ್ಗವನ್ನು ಸುಟ್ಟು ಧೂಳೀಪಟ ಮಾಡಿ ನಮಗೆಲ್ಲ ಮಿಖನೋಡಿಸಬೇಕು" ಎಂದು ಗುಂಡುಮಬ್ಬೆ ಎಚ್ಚರಿಸಿದಳು. ಅಣ್ಣಿಗನನ್ನು ಚಂಡಿನಂತೆ ಹಿಡಿದು ಚಣಕಾಲು ಅವನನ್ನು ನಗಿಸಿ ನಾಗದೇವ ಸೈನ್ಯವನ್ನು ಮುನ್ನಡೆಸಲು ಹೊರಟನು. ಅವನು ಕಾಣುವ ತನಕ ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ಹಾಗೇ ನೋಡುತ್ತ ನಿಂತಿದ್ದರು.